ಸಾಕ್ಷಿಯನ್ನು ದಿನಾಂಕ 11.06.2018ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು

ಪಾಟೀ ಸವಾಲು : ಪ್ರತಿವಾದಿಯ ಪರ ವಕೀಲರಿಂದ.

ಸರ್ವೆ ನಂ.126 , 127 ಮತ್ತು 128 ಮೂಲತಃ ರುದ್ರಾಣಮ್ಮ ಅವರಿಗೆ ಸೇರಿದಂತಹ ಸ್ವತ್ತುಗಳು ಎಂದರೆ ಸರಿ. ಅವರಿಗೆ ಅವರ ತಾಯಿ ಮುಖಾಂತರ ಸದರಿ ಸ್ವತ್ತುಗಳು ಬಂದಿರುತ್ತವೆ ಎಂದರೆ ಸರಿ. ಸರ್ವೆ ನಂ.126ರಲ್ಲಿ 5 ಎಕರೆ 8 ಗುಂಟೆ ಜಮೀನು ಇರುತ್ತದೆ. ಸರ್ವೆ ನಂ.127ರಲ್ಲಿ 3 ಎಕರೆ 28 ಗುಂಟೆ ಮತ್ತು 3 ಗುಂಟೆ ಕರಾಬು ಇರುತ್ತದೆ. ಸರ್ವೆ ನಂ.128ರಲ್ಲಿ ಒಟ್ಟು 4 ಎಕರೆ 21 ಗುಂಟೆ ಜಮೀನು ಇರುತ್ತದೆ. ಸದರಿ 3 ಸರ್ವೆ ನಂಬರುಗಳಲ್ಲಿ ಒಟ್ಟು 13 ಎಕರೆ 17 ಗುಂಟೆ ಜಮೀನು ಇರುತ್ತದೆ ಎಂದರೆ ಗೊತ್ತಿಲ್ಲ.

ರುದ್ರಾಣಮ್ಮ ಅವರ ಸಾಕುಮಗಳ ಹೆಸರು ಸರ್ವಮಂಗಳಮ್ಮ. ಅವರನ್ನು ಮಾದಪ್ಪ ಅವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಮಾದಪ್ಪ ಅವರಿಗೆ 3 ಜನ ಗಂಡು ಮಕ್ಕಳು ಎಂದರೆ ಸಾಕ್ಷಿಯು 4 ಜನ ಗಂಡು ಮಕ್ಕಳು ಮತ್ತು ಒಬ್ಬರು ಹೆಣ್ಣು ಮಗಳು ಎಂದು ನುಡಿಯುತ್ತಾರೆ. ರುದ್ರಾಣಮ್ಮ ಅವರು ದಾವಾ ಸ್ವತ್ತನ್ನು ನನಗೆ ದಾನ ಮಾಡುವುದಕ್ಕಿಂತ ಮುಂಚೆ ಅವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿ. ಸದರಿ 3 ಸರ್ವೆ ನಂಬರುಗಳಲ್ಲಿ ಈಗ 3 ಪಾತಿಗಳಿರುವಂತೆ (ತೆವರಿಗಳು) 1963 ರಲ್ಲಿಯೂ ಸಹ ಅದೇ ರೀತಿ ಇತ್ತು ಎಂದರೆ ಸರಿ. 1963 ರಿಂದ ದಾವೆ ಹಾಕುವವರೆಗೆ 3 ಸರ್ವೆ ನಂಬರುಗಳಲ್ಲಿರುವ ಒಟ್ಟು ವಿಸ್ತೀರ್ಣವನ್ನು ಅಳತೆ ಮಾಡಿಸಿರುವುದಿಲ್ಲ ಆದರೆ ದಾವಾಸ್ವತ್ತನ್ನು ಮಾತ್ರ ಅಳತೆ ಮಾಡಿಸಿರುತ್ತೇನೆ. ವಾದಪತ್ರದಲ್ಲಿ ಸರ್ವೆ ನಂ.126 ಮತ್ತು 128 ಅದಲು ಬದಲಾಗಿರುತ್ತದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಸರ್ವೆ ನಂ.126ರಲ್ಲಿ ಬೌಧಿಕವಾಗಿ ಒಟ್ಟು 4 ಎಕರೆ 21 ಗುಂಟೆ ಜಮೀನು ಇರುತ್ತದೆ ಆದರೆ ಪಹಣಿಗಳಲ್ಲಿ 5 ಎಕರೆ 8 ಗುಂಟೆ ಇರುತ್ತದೆ ಎಂದರೆ ಸಾಕ್ಷಿಯು ವಾಸ್ತವವಾಗಿ 5 ಎಕರೆ 8 ಗುಂಟೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ.

ಸರ್ವೆ ನಂ.128ರಲ್ಲಿ ವಾಸ್ತವವಾಗಿ ಒಟ್ಟು 5 ಎಕರೆ 8 ಗುಂಟೆ ಜಮೀನು ಇರುತ್ತದೆ ಆದರೆ ಪಹಣಿಯಲ್ಲಿ 4 ಎಕರೆ 21 ಗುಂಟೆ ಇರುತ್ತದೆ ಎಂದರೆ ಗೊತ್ತಿಲ್ಲ.

ಸರ್ವೆ ನಂ.126ರ ಜಮೀನು ಕಾವೇರಿ ನದಿಯ ಪಾರ್ಶ್ವದಲ್ಲಿ ಇರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ನಕ್ಷೆಯು ಒಡೆಯಾಂಡಹಳ್ಳಿ ಗ್ರಾಮದ ನಕ್ಷೆ ಎಂದರೆ ಸರಿ. ಅದನ್ನು ಪ್ರತಿವಾದಿಗಳ ಪರ ನಿಡಿ.1 ಎಂದು ಗುರುತಿಸಲಾಯಿತು. ಸರ್ವೆ ನಂ.126, 127 ಮತ್ತು 128 ರ ಜಮೀನುಗಳು ಪಶ್ಚಿಮದಿಂದ ಪೂರ್ವಕ್ಕೆ ಕ್ರಮವಾಗಿರುತ್ತವೆ ಎಂದರೆ ಸರಿ. ಸರ್ವೆ ನಂ.126 ಕಾವೇರಿ ನದಿಯ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಅಜ್ಜಿ ನನ್ನ 3 ಜನ ಅಣ್ಣ ತಮ್ಮಂದಿರಿಗೆ ಪ್ರತ್ಯೇಕವಾಗಿ ದಾನಪತ್ರಗಳನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಪುಟ್ಟಣ್ಣ ಅವರಿಗೆ ಬರೆದುಕೊಟ್ಟಿರುವ ದಾನಪತ್ರದಲ್ಲಿರುವ ಚೌತರ್ಪನ್ನು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ದಾನಪತ್ರದಲ್ಲಿ ಬರೆದಿರುವ ಚೌತರ್ಪನ್ನು ನಾನು ತಿಳಿದುಕೊಂಡಿರುತ್ತೇನೆ. ನನ್ನ ದಾನಪತ್ರದ ಚೌತರ್ಪಿನ ಪ್ರಕಾರ ಪೂರ್ವಕ್ಕೆ : ರತ್ನಮ್ಮ , ಪಶ್ಚಿಮಕ್ಕೆ : ನನ್ನ ಅಣ್ಣ ಶಿವಸ್ವಾಮಿ, ದಕ್ಷಿಣಕ್ಕೆ : ನನ್ನ ಅಣ್ಣ ಪುಟ್ಟಣ್ಣ ಎಂದು ಬರೆದಿರುತ್ತದೆ. ಪುಟ್ಟಣ್ಣ ಅವರಿಗೆ 5 ಎಕರೆ 8 ಗುಂಟೆ ಜಮೀನನ್ನು ಸರ್ವೆ ನಂ.126ರಲ್ಲಿ ಕೊಟ್ಟಿರುತ್ತಾರೆ. ಆ ವಿಸ್ತೀರ್ಣದಲ್ಲಿ ಪುಟ್ಟಣ್ಣ ಅವರು 1ನೇ ಪ್ರತಿವಾದಿಯ ಗಂಡನಿಗೆ ಮೂರು ಎಕರೆ 20 ಗುಂಟೆ ಜಮೀನು ಮತ್ತು ಇನ್ನೊಬ್ಬರಿಗೆ ಮಾರಾಟ ಮಾಡಿರುತ್ತಾರೆ. ನಾಗಮ್ಮ ಅವರಿಗೆ ಒಂದು ಎಕರೆ 28 ಗುಂಟೆ ಜಮೀನನ್ನು ಪುಟ್ಟಣ್ಣ ಅವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ನಾಗಮ್ಮ ಅವರು ಒಂದು ಎಕರೆ 28 ಗುಂಟೆ ಜಮೀನನ್ನು ಮುರಳೀಧರ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯದಾರರು ಸದರಿ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ.

ಪುಟ್ಟಣ್ಣ ಅವರಿಗೆ ಆಗಿರುವ ದಾನಪತ್ರದ ಚೌತರ್ಪಿನಲ್ಲಿ ಇರುವ 5 ಎಕರೆ 8 ಗುಂಟೆ ಜಮೀನಿನಲ್ಲಿ ಹಾಲಿ ಕ್ರಯದಾರರೂ ಸಹ ಅವರವರ ಕ್ರಯದ ವಿಸ್ತೀರ್ಣದಂತೆ ಅದೇ ಚೌತರ್ಪಿನಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ಪುಟ್ಟಣ್ಣ ಅವರಿಗೆ ದಾನಪತ್ರವನ್ನು ಮಾಡಿಕೊಡುವಾಗ ರುದ್ರಾಣಮ್ಮ ಅವರು ಸರ್ವೆ ನಂ.128ರ ಬದಲಾಗಿ 126 ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶಿವಸ್ವಾಮಿ ಅವರಿಗೆ ದಾನಪತ್ರವನ್ನು ಮಾಡಿಕೊಡುವಾಗ ರುದ್ರಾಣಮ್ಮ ಅವರು ಸರ್ವೆ ನಂ.126ರ ಬದಲಾಗಿ 128 ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಒತ್ತುವರಿಯನ್ನು ನಿರ್ಧಾರ ಮಾಡಲು ನ್ಯಾಯಾಲಯದಿಂದ ಆಯುಕ್ತರನ್ನು ನೇಮಕ ಮಾಡಿ 3 ಸರ್ವೆ ನಂಬರುಗಳ ಒಟ್ಟು ವಿಸ್ತೀರ್ಣ ಮತ್ತು ಪ್ರತ್ಯೇಕವಾದ ವಿಸ್ತೀರ್ಣವನ್ನು ಅಳತೆ ಮಾಡಿ ನಿರ್ದಿಷ್ಟವಾಗಿ ಯಾವ ಸರ್ವೆ ನಂಬರಿನಲ್ಲಿ ನನ್ನ ಜಮೀನು ಒತ್ತುವರಿಯಾಗಿರುತ್ತದೆ ಎಂದು ವರದಿಯನ್ನು ತರಿಸಿಕೊಳ್ಳಲು ನನ್ನ ತಕರಾರು ಇರುವುದಿಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು. )

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,
ಟಿ ನರಸೀಪುರ.